ಅಸಲು ದಾವಾ ನಂ.148/2017
ಡಿ ಡಬ್ಲು -1

ದಿನಾಂಕಃ 14-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರದ ಮುಖ್ಯ ವಿಚಾರಣೆಃ- ಪ್ರತಿವಾದಿಯರ ಪರ ಶ್ರೀ. ವಿಬಿಟಿ ವಕೀಲರಿಂದ.**

ಡ.ನಂಬರ 1775, 1921 ಇವುಗಳ ದೃಢೀಕೃತ ನಕಲು ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಡಿ-1 ಮತ್ತು ನಿಡಿ-2 ಎಂದು, ಸರ್ವೇ ನಂ.39/2 ಕ ಇದರ 2021-22 ರ ಪಹಣಿ ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-3 ಎಂದು, ಸರ್ವೇ ನಂ.39/2 ಕ ಇದರ ಸನ್ 1996 ರಿಂದ 2001 ರವರೆಗಿನ ಕೈಬರಹ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಒಟ್ಟಾರೆಯಾಗಿ ನಿಡಿ-4 ಎಂದು, ದಿನಾಂಕ 22-04-1960 ರ ಖರೀದಿ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-5 ಎಂದು ಗುರುತಿಸಲಾಯಿತು. ದಿನಾಂಕ 08-07-1988 ರ ದತ್ತಕ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಸದರಿ ದಾಖಲೆಯನ್ನು ನಿಶಾನೆ ಅಂತಾ ಗುರುತಿಸಲು ವಾದಿ ಪರ ವಕೀಲರು ತಮ್ಮ ಆಕ್ಷೇಪಣೆ ವ್ಯಕ್ತಪಡಿಸಿದ್ದು, ಅವರ ತಕರಾರಿಗೆ ಒಳಪಟ್ಟು ರುಜುವಾತಿನ ಭಾರದೊಂದಿಗೆ ಸದರಿ ದಾಖಲೆಯನ್ನು ನಿಡಿ-6 ಎಂದು ಗುರುತಿಸಲಾಯಿತು. ದಿನಾಂಕ 04-05-1999 ರ ಮೃತ್ಯುಪತ್ರವನ್ನು ಹಾಜರುಪಡಿಸಿರುತ್ತೇನೆ. ಆರ್ ಟಿಎಸ್ಎಪಿಎಸ್ಆರ್ 132/1998-99 ರ ರೋಜನಮೆಯ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-7 ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ಮೇಲ್ಮನವಿ ಸಂಖ್ಯೆಃ 76/2019 ರ ಮೂಲ ಕಡತದಿಂದ ಪಡೆದುಕೊಂಡು ಈ ದಾವೆಯಲ್ಲಿ ನಿಶಾನೆ ಅಂತಾ ಗುರುತಿಸಲಾಗಿರುತ್ತದೆ. ಆದ್ದರಿಂದ ಕಚೇರಿಯವರು ವಾದಿ ಪರ ವಕೀಲರಿಗೆ ಸದರಿ ದಾಖಲೆಗಳ ದೃಢೀಕೃತ ನಕಲನ್ನು ಯಾವುದೇ ಫೀ ಹಣ ಪಡೆಯದೇ ನೀಡಲು ಆದೇಶಿಸಿದೆ.

ಆದ್ದರಿಂದ ನಾನು ಕೋರಲಾದಂತೆ ದಾವೆಯನ್ನು ಖರ್ಚು ಸಹಿತ ವಜಾ ಮಾಡಲು ಪ್ರಾರ್ಥಿಸುತ್ತೇನೆ.

ಅಸಲು ದಾವಾ ನಂ.148/2017
ಡಿ ಡಬ್ಲು -1

**<u>ಪಾಟೀಸವಾಲುಃ-</u>** ವಾದಿ ಪರ ಶ್ರೀ.ಎಸ್ ಎಸ್ ಹೆಚ್ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).